C.R.P.67

| |
|---|
| Form No.4<br>(Civil)<br>Depositions<br>sheets<br>R.P.No.57 |

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಮಂಡ್ಯ *(ಆಸೀನ ಶ್ರೀರಂಗಪಟ್ಟಣ)*
ಸತ್ರ ಪ್ರಕರಣ ಸಂಖ್ಯೆಃ 5067/2014

ಪ್ರಾ.ಸಾ. 1

ಸಾಕ್ಷಿಯ ಹೆಸರು: ಡಿ. ದೇವರಾಜು.
ತಂದೆಯ ಹೆಸರು: ದೇವರಾಜೇಗೌಡ
ವಯಸ್ಸು: 48 ವರ್ಷ.
ಉದ್ಯೋಗ: ಹೆಚ್.ಸಿ. ನಂಃ 342.
ವಾಸ: ಶ್ರೀರಂಗಪಟ್ಟಣ ಪಟ್ಟಣ ಪೊಲೀಸ್ ಠಾಣೆ.

ಸಾಕ್ಷ್ಯಿದಾರನಿಗೆ ದಿನಾಂಕ 23-4-2018 ರಂದು ಪ್ರಮಾಣವಚನ ಬೋಧಿಸಿದೆ.

ಮುಖ್ಯ ವಿಚಾರಣೆಃ ಮಾನ್ಯ ಅಭಿಯೋಜಕರಿಂದ

ನಾನು 2013 ನೇ ಇಸ್ವಿಯಿಂದ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ನ್ಯಾಯಾಲಯದಿಂದ ಈ ಪ್ರಕರಣದ 1 ನೇ ಆರೋಪಿ ಜಯರಾಂ , 2 ನೇ ಆರೋಪಿ ಮಹಮದ್ ಕಬೀರ್ ಹಾಗೂ 4 ನೇ ಆರೋಪಿ ರಾಜಶೇಖರ್ ಅವರ ವಿರುದ್ದ ಹೊರಡಿಸಿದ ಉದ್ಘೋಷಣೆ ವಾರೆಂಟನ್ನು ಜಾರಿ ಮಾಡಲು ಆದೇಶ ಬಂದಿದ್ದು ಆ ಪ್ರಕಾರ 1 ಮತ್ತು 4 ನೇ ಆರೋಪಿತರು ಒಂದೇ ಊರಿನಲ್ಲಿ ಅಕ್ಕ - ಪಕ್ಕದ ಮನೆಯವರಾಗಿರುವ ಕಾರಣ ನಾನು ಸ್ಥಳಕ್ಕೆ ಹೋಗಿ ವಿಚಾರ ಮಾಡಲಾಗಿ ಸದರಿ ವಿಳಾಸದಲ್ಲಿ ಆರೋಪಿತರು ಇರುವುದಿಲ್ಲ ಎಂದು ಮತ್ತು 1 ನೇ ಆರೋಪಿಯ ಮನೆಯಲ್ಲಿ ಅವನ ತಂದೆ - ತಾಯಿಯರು ಇದ್ದು , 1 ನೇ ಆರೋಪಿ ಜೈಲಿಗೆ ಹೋಗಿ ಬಂದ ನಂತರ ಬೆಂಗಳೂರಿಗೆ ಹೋದವನು ವಾಪಸ್ಸು ಬಂದಿಲ್ಲ ಮತ್ತು ಈಗ ಎಲ್ಲಿದ್ದಾನೆ ಎಂದು ಗೊತ್ತಿಲ್ಲ ಎಂದು ತಿಳಿಸಿದರು. ಪಕ್ಕದಲ್ಲಿದ್ದ 4 ನೇ ಆರೋಪಿಯ ಮನೆಯಲ್ಲಿ ಬೀಗ ಹಾಕಿತ್ತು ವಿಚಾರಿಸಲಾಗಿ ಅಲ್ಲಿ ಅವನು ಜೈಲಪಿಗೆ ಹೋಗಿ ನಂತರ ನಂತರ ಸದರಿ ಮನೆಯಲ್ಲಿ ಯಾರು ವಾಸವಾಗಿಲ್ಲ ಎಂದು ಅವನು ಎಲ್ಲಿ ವಾಸವಾಗಿದ್ದಾನೆ ತಿಳಿದಿಲ್ಲ ಎಂದು ತಿಳಿಸಿದ ಮೇರೆಗೆ ನಾನು ಪ್ರಕರಣದ

ಪ್ರೊಕ್ಲಮೇಷನನ್ನು ಅವರ ಬಾಗಿಲಿಗೆ ಅಂಟಿಸಿ ನಂತರ ಟಾಂ ಟಾಂ ಮೂಲಕ ಅವರ ವಿರುದ್ಧ ವಾರೆಂಟ್ ಮತ್ತು ಪ್ರೊಕ್ಲಮೇಷನ್ ಜಾರಿಯಾಗಿರುವ ಬಗ್ಗೆ ಪ್ರಚಾರ ಪಡಿಸಿದೆ. ಅಲ್ಲಿ ಸದರಿ 1 ಮತ್ತು 4 ನೇ ಆರೋಪಿತರ ಚರ ಮತ್ತು ಸ್ಥಿರ ಆಸ್ತಿಯ ಬಗ್ಗೆ ವಿಚಾರಿಸಲಾಗಿ ಸದರಿ ಇಬ್ಬರ ಹೆಸರಿನಲ್ಲಿ ಯಾವುದೇ ಚರ ಮತ್ತು ಸ್ಥಿರ ಆಸ್ತಿ ಇಲ್ಲ ಎಂದು ತಿಳಿದು ಬಂತು. ಅದರಂತೆ ನಾನು ಪಂಚರ ಸಮಕ್ಷಮ ಮಹಜರ್ ಮಾಡಿದ್ದು ಅದನ್ನು ಈಗ ನಿಪಿಃ 1 ಎಂದು ಸಹಿಯನ್ನು ನಿಪಿಃ 1 ಎ ಎಂದು ಗುರುತಿಸಲಾಯಿತು. ಪ್ರೊಕ್ಕಮೇಷನ್ ವಾರೆಂಟ್ ಅಂಟಿಸಿದ ಬಗ್ಗೆ ನಾಡ ಕಚೇರಿ ಮತ್ತು ಸಾರ್ವಜನಿಕ ಸ್ಥಳದ ಪೊಟೋ ಕೂಡ ತೆಗೆದು ಹಾಜರ್ಪಡಿಸಿದ್ದೇನೆ. ಸದರಿ ಪೊಟೋದ ಪ್ರತಿಗಳನ್ನು ನಿಪಿಃ 2 ಎಂದು ಗುರುತಿಸಲಾಯಿತು. ಸದರಿ 1 ಮತ್ತು 4 ನೇ ಆರೋಪಿಗಳಿಗೆ ಸ್ಥಿರ ಆಸ್ತಿಗಳಿರುವ ಬಗ್ಗೆ ಮಾಹಿತಿ ಕೋರಿ ಸೋಸಲೆ ಗ್ರಾಮ ಪಂಚಾಯ್ತಿಯ ಪಿ.ಡಿ.ಓ ರವರಿಗೆ ಮನವಿ ಪತ್ರ ಸಲ್ಲಿಸಿದೆ. ಸದರಿ ಮನವಿ ಪತ್ರವನ್ನು ನಿಪಿಃ 3 ಎಂದು ಗುರುತಿಸಲಾಯಿತು. ಸದರಿ ಗ್ರಾಮ ಪಂಚಾಯ್ತಿಯವರು 1 ಮತ್ತು 4 ನೇ ಆರೋಪಿತರಿಗೆ ಯಾವುದೇ ಸ್ಥಿರ ಆಸ್ತಿ ಇಲ್ಲ ಎಂದು ಹಿಂಬರಹ ನೀಡಿದ್ದು ಅದನ್ನು ನಿಪಿಃ 4 ಎಂದು ಗುರುತಿಸಲಾಯಿತು. 1 ನೇ ಆರೋಪಿಗಳಿಗೆ ನೀಡಿದ ಪ್ರೊಕ್ಲಮೇಷನ್ ವಾರೆಂಟನ್ನು ನ್ಯಾಯಾಲಯಕ್ಕೆ ಹಿಂತಿರುಗಿಸಿದ್ದು ಅದನ್ನು ನಿಪಿಃ 5 ಎಂದು ಗುರುತಿಸಲಾಯಿತು. ಜಪ್ತಿ ವಾರೆಂಟನ್ನು ಸಹ ನ್ಯಾಯಾಲಯಕ್ಕೆ ಹಿಂತಿರುಗಿಸಿದ್ದು ಅದನ್ನು ನಿಪಿಃ 6 ಎಂದು ಗುರುತಿಸಲಾಯಿತು. 1 ನೇ ಆರೋಪಿಯ ಮನೆಯ ಬಳಿ ಮಾಡಿದ ಮಹಜರನ್ನು ನಿಪಿಃ 7 ಎಂದು ನನ್ನ ಸಹಿಯನ್ನು ನಿಪಿಃ 7(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿಯ ಮನೆಯ ಬಾಗಿಲಿಗೆ, ನಾಡ ಕಚೇರಿಯ ನೊಟೀಸ್ ಬೋರ್ಡ್‌ಗೆ ಹಾಗೂ ಸಾರ್ವಜನಿಕ ಸ್ಥಳದಲ್ಲಿ ಪೊಟೋಗಳನ್ನು ತೆಗೆದಿದ್ದು ಮೂರು ಪೊಟೋದ ಪ್ರತಿಗಳನ್ನ ಒಟ್ಟಾಗಿ ನಿಪಿಃ 8 ಎಂದು ಗುರುತಿಸಲಾಯಿತು. 1 ನೇ ಆರೋಪಿಯ ಆಸ್ತಿ ವಿವರ ಕೋರಿ ಗ್ರಾಮ ಪಂಚಾಯ್ತಿಯ ಪಿ.ಡಿ.ಒ. ರವರಿಗೆ ಕೊಟ್ಟ ಮನವಿ ಪತ್ರದ ಪ್ರತಿಯನ್ನು ನಿಪಿಃ 9 ಎಂದು ಗುರುತಿಸಲಾಯಿತು. 1 ನೇ ಆರೋಪಿಯ ವಿರುದ್ಧ ಹೊರಡಿಸಿದ್ದ ಜಾಮೀನು ರಹಿತ ವಾರೆಂಟನ್ನು ಹಿಂದಿರುಗಿಸಿದ್ದು ಅದನ್ನು ನಿಪಿಃ 10 ಎಂದು ಗುರುತಿಸಲಾಯಿತು. 1 ನೇ ಆರೋಪಿಯ ವಿರುದ್ಧ

ಪ್ರೊಕ್ಲಮೇಷನ್ ಜಾರಿ ಮಾಡಿದ ಬಗ್ಗೆ ನಾನು ವರದಿ ಮಾಡಿದ್ದು ಅದನ್ನು ನಿಪಿಃ 11 ಎಂದು ಗುರುತಿಸಲಾಯಿತು.

2. 4 ನೇ ಆರೋಪಿಯ ವಿರುದ್ಧ ನೀಡಿದ, ಚರ ಸ್ಥಿರ ಆಸ್ತಿಗಳ ಜಪ್ತಿ ವಾರೆಂಟ್‌ನ್ನು ನ್ಯಾಯಾಲಯಕ್ಕೆ ಹಿಂತಿರುಗಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 12 ಮತ್ತು 13 ಎಂದು ಗುರುತಿಸಲಾಯಿತು. 4 ನೇ ಆರೋಪಿಯ ವಿರುದ್ಧ ಪ್ರೊಕ್ಲಮೇಷನ್ ವಾರೆಂಟ್ ಜಾರಿ ಮಾಡಿದ ಬಗ್ಗೆ ವರದಿ ನೀಡಿದ್ದು ಅದನ್ನು ನಿಪಿಃ 14 ಎಂದು ಗುರುತಿಸಲಾಯಿತು.

3. ನಂತರ 2 ನೇ ಆರೋಪಿಯ ವಿರುದ್ಧ ನೀಡಿದ್ದ ಪ್ರೊಕ್ಲಮೇಷನ್ ಹಾಗೂ ಜಪ್ತಿ ವಾರೆಂಟನ್ನು ಜಾರಿ ಮಾಡಲು ದಿನಾಂಕ ಃ 7–2–2017 ರಂದು ಕೇರಳದ ಕಾಂಜೀಗೊಡ ತಾಲೋಕು , ಹೊಸದುರ್ಗ ಅಂಚೆ , ಹಜನೂರು ಗ್ರಾಮಕ್ಕೆ ಹೋಗಿ ಅಲ್ಲಿ ಗ್ರಾಮ ಪಂಚಾಯ್ತಿಯಲ್ಲಿ ವಿಚಾರ ಮಾಡಲಾಗಿ ಆರೋಪಿ ವಿಳಾಸ ನೀಡಿರುವ ಕೊಳಲೂರು ಗ್ರಾಮ ಯಾವುದು ಇಲ್ಲ ಎಂದು ತಿಳಿಸಿದ ಮೇರೆಗೆ ನಾನು ಆ ಗ್ರಾಮ ಪಂಚಾಯ್ತಿ ಸಮಕ್ಷಮ ಮಹಜರ್ ಮಾಡಿರುತ್ತೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ನಿಪಿಃ 15 ಎಂದು ನನ್ನ ಸಹಿಯನ್ನು ನಿಪಿಃ 15 ಎ ಎಂದು ಗುರುತಿಸಲಾಯಿತು. ನಂತರ ಸದರಿ ಗ್ರಾಮಂ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಟಾಂ ಟಾಂ ಮೂಲಕ 2 ನೇ ಆರೋಪಿ ವಿರುದ್ಧ ಜಾಮೀನು ರಹಿತ ವಾರೆಂಟ್ ಮತ್ತು ಪ್ರೊಕ್ಲಮೇಷನ್ ಜಾರಿಯಾದ ಬಗ್ಗೆ ಪ್ರಚಾರಪಡಿಸಿದೆ. ನಂತರ ಗ್ರಾಮ ಪಂಚಾಯ್ತಿ , ಬ್ಯಾಂಕ್ , ತಾಲೋಕು ಕಚೇರಿ ಮತ್ತು ಸರ್ಕಲ್ಲಿನಲ್ಲಿ ಪ್ರೊಕ್ಲಮೇಷನ್ ಪ್ರತಿಗಳನ್ನು ಅಂಟಿಸಿ ಪೊಟೋಗಳನ್ನು ತೆಗೆದುಕೊಂಡಿರುತ್ತೇನೆ. ಸದರಿ 4 ಪೊಟೋಗಳನ್ನು ನಿಪಿಃ 16 ಎಂದು ಗುರುತಿಸಲಾಯಿತು ನಂತರ ಹಜನೂರು ಗ್ರಾಮ ಪಂಚಾಯ್ತಿಯ ಕಾರ್ಯದರ್ಶಿಗೆ ಆರಪಿ ಸಿಕ್ಕಲ್ಲಿ ಅವನ ಬಗ್ಗೆ ಮಾಹಿತಿ ನೀಡಲು ಮತ್ತು ಅವನ ಚರ ಮತ್ತು ಸ್ಥಿರ ಆಸ್ತಿಯ ಬಗ್ಗೆ ಮಾಹಿತಿ ನೀಡಲು ಮನವಿ ಪತ್ರ ಸಲ್ಲಿಸಿದೆ. ಸದರಿ ಮನವಿ ಪತ್ರದ ಪ್ರತಿಯನ್ನು ನಿಪಿಃ 17 ಎಂದು ಗುರುತಿಸಲಾಯಿತು. 2 ನೇ ಆರೋಪಿಯ ವಿರುದ್ಧ ಹೊಡಿಸಲಾಗಿದ್ದ ವಾರೆಂಟನ್ನು ವಾರೆಂಟನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಅದನ್ನು ನಿಪಿಃ 18 ಎಂದು ಗುರುತಿಸಲಾಯಿತು .

ಈ ಹಂತದಲ್ಲಿ ಸಾಕ್ಷಿ ಮತ್ತಷ್ಟು ದಾಖಲೆ ಹಾಜರ್ಪಡಿಸಲು ಕಾಲಾವಕಾಶ ಕೋರಿದ ಮೇರೆಗೆ ವಿಚಾರಣೆಯನ್ನು ಮುಂದೂಡಲಾಯಿತು.

**(ನನ್ನ ಉಕ್ತಲೇಖನದ ಮೇರೆಗೆ ತೆ.ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು).**

ಓ ಹೇ ಕೇ ಸ ಇ,

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ ***(ಆಸೀನ ಶ್ರೀರಂಗಪಟ್ಟಣ).***